# ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹಿರಿಯೂರು

## ಸಿ.ಸಿ ನಂ.44/2023

| | | |
|---|---|---|
| ಸಾಕ್ಷಿದಾರರ ಹೆಸರು | – ಯೋಗಮ್ಮ | ಸಿಡಬ್ಲ್ಯೂ-1 |
| ತಂದೆಯ ಹೆಸರು | – ಕೇಶವ ಮೂರ್ತಿ | ಪಿಡಬ್ಲ್ಯೂ-1 |
| ವಯಸ್ಸು | – 42 ವರ್ಷ | |
| ಉದ್ಯೋಗ | – ಕೂಲಿ ಕೆಲಸ | |
| ವಾಸ | – ಪುಟ್ಟಯ್ಯನಕಟ್ಟೆ ಗ್ರಾಮ | |

**ದಿನಾಂಕಃ 06.04.2026 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.**

**ಸಾಕ್ಷಿದಾರರ ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ**

ಚಾಸಾ.2 ನನ್ನ ಅತ್ತೆ . ಚಾಸಾ.3 ರಿಂದ 7 ರವರು ನನಗೆ ಗೊತ್ತು. ಆರೋಪಿ ನನಗೆ ಗೊತ್ತು. ಆರೋಪಿತರು ನನಗೆ ಜಗಳ ಮಾಡಿಲ್ಲ, ಹೊಡೆದಿಲ್ಲ ಬಡಿದಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಬಟ್ಟೆ ಹಿಡಿದು ಎಳೆದಾಡಿಲ್ಲ, ಬೆದರಿಕೆ ಹಾಕಿಲ್ಲ, ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ. ಪೊಲೀಸರಿಗೆ ದುಾರು ನೀಡಿಲ್ಲ. ಸಾಕ್ಷಿ ದೂರು ಮತ್ತು ಮಹಜರ್ ನಲ್ಲಿರುವ ಸಹಿ ನೋಡಿ ಗುರುತಿಸಿದ್ದು ದೂರನ್ನು ನಿಪಿ-1 ಎಂದು ಸಹಿಯನ್ನು ನಿಪಿ-1(ಎ) ಎಂದು ಮಹಜರನ್ನು ನಿಪಿ-2 ಎಂದು ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಪ್ರಾಣ ಬೆದರಿಕೆ ಹಾಕಿಲ್ಲ. ಮೂರು ವರ್ಷಗಳ ಹಿಂದ ಪೊಲಿಸ್ ಠಾಣೆಯಲ್ಲಿ ದಾಖಲೆಗಳಿಗೆ ಸಹಿ ಮಾಡಿದ್ದೇನೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮತ್ತು ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಸ ಸ ಅಭಿಯೋಜಕರು ಕೋರಿದ್ದರಿಂದ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ**

ದಿಃ08.10.2022 ರಂದು ಸುಮಾರು 8.30 ರ ಸಮಯದಲ್ಲಿ ಹಿರಿಯೂರು ತಾ ಪುಟ್ಟಯ್ಯನಕಟ್ಟೆ ಗ್ರಾಮದ ಜಗನ್ನಾಥರವರ ಅಂಗಡಿ ಮುಂದಿನ ಟಾರ್ ರಸ್ತೆಯಲ್ಲಿ ನಡೆದುಕೊಂಡು

ಬರುತ್ತಿದ್ದ ಚಾಸಾ.3 ರವರಿಗೆ ಏನೋ ಸೂಳೆ ಮಾಗನೆ ಬೋಳಿ ಮಗನೇ ನಾನು ಕೆಲಸಕ್ಕೆ ಬಾರದೆ ಇದ್ದರೂ ನೀನು ಹೋಗಿದ್ದೀಯ ಎಂದು ಅವಾಚ್ಯ ಶಬ್ದಗಳಿಂದ ಬೈದಾಡಿ ಕೈಕಾಲುಗಳಿಂದ ಹೊಡೆದು ಕೊರಳು ಪಟ್ಟಿ ಹಿಡಿದು ಎಳೆದುಕೊಂಡು ಹೋಗುತ್ತಿದ್ದು ಈ ಬಗ್ಗೆ ನಾನು ಮತ್ತು ಚಾಸಾ.2 ರವರು ಕೇಳಿದ್ದಕ್ಕೆ ಆರೋಪಿತರು ಅವರಿಗೆ ಸೂಳೆ ಮುಂಡೆರ ಬೋಳಿ ಮುಂಡೆರಾ ನಾನು ಕೆಲಸಕ್ಕೆ ಹೋಗದಿದ್ದರೆ ನಿಮ್ಮ ತಮ್ಮನ್ನು ಸಹ ಕೆಲಸಕ್ಕೆ ಹೋಗಬಾರದು ಏಕೆ ಅವನು ಕೆಲಸಕ್ಕೆ ಹೋಗಿದ್ದಾನೆ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದಾನೆ ಎಂದರೆ ಸರಿಯಲ್ಲ. ಚಾಸಾ.3 ರವರಿಗೆ ಪುನಃ ಆರೊಪಿ ಪುನಃ ಕೈಕಾಲುಗಳಿಂದ ಹೊಡೆದು ನೆಲಕ್ಕೆ ತಳ್ಳಿ , ಬಿಡಿಸಲು ಹೋದ ನನಗೆ ಕೈಕಾಲುಗಳಿಂದ ಹೊಡೆದು ನಾನು ಧರಿಸಿದ್ದ ನೈಟಿ ಹರಿದು ಹಾಕಿ ಚಾಸಾ.2 ರವರಿಗೆ ಕಲ್ಲಿನಿಂದ ಹೊಡೆದು ನನಗೆ ಮತ್ತು ಚಾಸಾ.2 ರವರಿಗೆ ಸಾಮಾನ್ಯ ಸ್ವರೂಪದ ಗಾಯ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಮ್ಮನ್ನು ಇಷ್ಟಕ್ಕೆ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿದ್ದಾರೆ ಎಂದರೆ ಸರಿಯಲ್ಲ. ನಾವು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ.

ದಿಃ 09.10.2022 ರಂದು ಸುಮಾರು 8 ರಿಂದ 8.45 ರ ಸಮಯದಲ್ಲಿ ಪೊಲೀಸರು ನನ್ನ ಹಾಗೂ ಚಾಸಾ.6, 7 ರವರ ಸಮಕ್ಷಮ ನಿಪಿ-2 ರಂತೆ ಪಂಚನಾಮೆ ಮಾಡಿ ನಾನು ನಿಡಿದ ನೈಟಿ ಮತ್ತು ಕಲ್ಲನ್ನು ಅಮಾನತ್ತು ಪಡಿಸಿಕೊಂಡು ನಮ್ಮ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ನಾವು ಈಗ ರಾಜೀ ಮಾಡಿಕೊಂಡಿದ್ದೇವೆ ಎಂದರೆ ಸರಿ. ಆ ಕಾರಣದಿಂದ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರ ಶ್ರೀ ಕೆ ವಿ ಆರ್ ವ ಕೀಲರಿಂದ-ಏನೂ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು